## ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ

## C .C.No. 285/2019

| | | |
|---|---|---|
| **ಹೆಸರುಃ** | **ಹರೀಶ ಎಸ್.ಬಿ.** | **DW-2** |
| **ತಂದೆ/ಗಂಡ ಹೆಸರುಃ** | **ಎಸ್.ಕೆ. ಭೀಮಯ್ಯ** | |
| **ವಯಸ್ಸುಃ** | **56 ವರ್ಷ** | |
| **ವೃತ್ತಿಃ** | **ವ್ಯಾಪಾರ** | |
| **ವಿಳಾಸಃ** | **ಬಾಳ್ಳುಪೇಟೆ ಗ್ರಾಮ** | **ದಿನಾಂಕಃ09.04.2026** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಐ.ಇ.ಪಿ. ವಕೀಲರಿಂದ**

ನನಗೆ ಆರೋಪಿ ಮತ್ತು ದೂರುದಾರರು 10 ವರ್ಷದಿಂದ ಪರಿಚಯವಿರುತ್ತಾರೆ. ಆರೋಪಿ ದೂರುದಾರರ ಮನೆಯಲ್ಲಿ ಬಾಡಿಗೆಗೆ ಇದ್ದರು ಅದರ ಸಲುವಾಗಿ ದೂರುದಾರರು ಆರೋಪಿಯ ಚೆಕ್ ನ್ನು ಪಡೆದಿರುತ್ತಾರೆ. 3 ಲಕ್ಷಕ್ಕೆ ಮನೆಯ ಬೋಗ್ಯ ಕರಾರು ಮಾಡಿಕೊಂಡು ಆರೋಪಿ 4 ಲಕ್ಷಕ್ಕೆ ಕರಾರು ಸಲುವಾಗಿ ಚೆಕ್ ನ್ನು ನೀಡಿರುತ್ತಾರೆ. ದೂರುದಾರರು ಅವರ ಮನೆಯಲ್ಲಿ ಒಂದು ಕೋಣೆಯನ್ನು ಆರೋಪಿಗೆ ನೀಡಿದ್ದರು. ಆರೋಪಿಯ ಲಗೇಜುಗಳನ್ನು ಮನೆಯ ಸೆಲ್ಲರನಲ್ಲಿ ಇಡಿಸಿದ್ದರು. ಆನಂತರ ಆರೋಪಿ ಮನೆಯನ್ನು ಬಿಟ್ಟು ಬಂದಿರುತ್ತಾರೆ. ಒಂದು ಬಾರಿ ಆರೋಪಿ ದೂರುದಾರರನ್ನು ಚೆಕ್ ವಾಪಸ್ಸು ಕೊಡುವಂತೆ ಕೇಳಿರುತ್ತಾರೆ. ಆ ಸಮಯದಲ್ಲಿ ನಾನು, ಗೋಪಿನಾಥ, ಪರ್ವತಯ್ಯ, ಸುರೇಶ ಮತ್ತು ಆರೋಪಿ

ಇದ್ದೇವು. ಆ ಸಮಯದಲ್ಲಿ ದೂರುದಾರರು ಚೆಕ್ ಹಾಳಾಗಿದೆ ಆನಂತರ ಕೊಡುತ್ತೇನೆ ಎಂದು ಹೇಳಿ ಕಳಿಸಿರುತ್ತಾರೆ. ಆನಂತರ ಏನಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

ಪಾಟೀ ಸವಾಲಿಗೆ ದೂರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

ಪ್ರಧಾನ **ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**